ವಿತದ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಿ ಹಾಸನ ತಾಲ್ಲೂಕಿನ ಬರಗಾಲಕ್ಕೆ ತುತ್ತಾಗುತ್ತಿರುವ ಪ್ರದೇಶಕ್ಕೆ ಶಾಶ್ವತ ಪರಿಹಾರ ಒದಗಿಸುವ ವಿಚಾರದಲ್ಲಿ ಭರವಸೆ ಕೊಟ್ಟಿದ್ದರು ಈ ಯೋಜನೆಯ ಅಂದಾಜು ಮತ್ತು ಪ್ಲಾನ್ ತಯಾರಾಗಿದ್ದು ಈ ಯೋಜನೆಯನ್ನು ತಕ್ಷಣ ಕಾರ್ಯಗತ ಮಾಡುವ ವಿಚಾರವನ್ನು ಮಾನ್ಯ ಭಾರಿ ನೀರಾವರಿ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ದಿನಾಂಕ 9-4-1991ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಾಸನ ಜಿಲ್ಲೆಯ ಹನುಮನಪಳ್ಳಿ ವಿತ ನೀರಾವರಿ ಯೋಜನೆಯನ್ನು ಪರಿಶೀಲಿಸಿ ಅನುಮೋದನೆ ನೀಡಬೇಕೆಂದು ನಿರ್ಧರಿಸಲಾಯಿತು. ಅದರಂತೆ. ಹೇಮಾವತಿ ಕೊಳ್ಳದಲ್ಲಿರುವ ನೀರಿನ ಲಭ್ಯತೆಯನ್ನನುಸರಿಸಿ 0.35 ಟಿ.ಎಂ.ಸಿ. ನೀರನ್ನು ಬಳಸುವ ಒಂದು ಯೋಜನೆಯನ್ನು ತಯಾರಿಸುವಂತೆ ತಾಂತ್ರಿಕ ಸಮಿತಿ ನಿರ್ಧಾರ ತೆಗೆದುಕೊಂಡಿತು.

ಈ ಯೋಜನೆಯ ಪೂರ್ವಭಾವಿ ತಪಾಸಣಾ ವರದಿಯನ್ನು ಈಗ ತಯಾರಿಸಲಾಗಿದೆ. ಮುಖ್ಯ ಇಂಜಿನಿಯರ್. ಸಣ್ಣ ನೀರಾವರಿ. ಇವರು ಎರಡು ಪರ್ಯಾಯ ಯೋಜನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ರೂ. 6.00 ಕೋಟಿಯ ಒಂದು ಅಂದಾಜಿ ಪ್ರಕಾರ 6500 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಪ್ರಸ್ತಾವೆಯಲ್ಲಿ ಆಗುವ ನೀರಿನ ಬಳಕೆ 0.65 ಟಿ.ಎಂ.ಸಿ. ಇನ್ನೊಂದು ಪರ್ಯಾಯ ಪ್ರಸ್ತಾವನೆಯ ಪ್ರಕಾರ ನೀರಾವರಿಯಾಗುವ ಪ್ರದೇಶ 9,600 ಎಕರೆ. ಇದರ ಅಂದಾಜು ರೂ. 10.75 ಕೋಟಿ ಮತ್ತು ನೀರಿನ ಬಳಕೆ 0.768 ಟಿ.ಎಂ.ಸಿ.

ಈ ಎರಡೂ ಪ್ರಸ್ತಾವೆಗಳಲ್ಲಿ ಆಗುವ ನೀರಿನ ಬಳಕೆ ತಾಂತ್ರಿಕ ಸಮಿತಿ ನಿರ್ಣಯಿಸಿರುವುದಕ್ಕಿಂತ ಹೆಚ್ಚಿರುವುದರಿಂದ. ಪುನಃ ಈ ಪ್ರಸ್ತಾವೆಗಳನ್ನು ತಾಂತ್ರಿಕ ಸಮಿತಿಯ ಮುಂದೆ ಮಂಡಿಸಿ ಅದರ ನಿರ್ಣಯದಂತೆ ಸಾಧುವಾದ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

5. ಚಿಕ್ಕಮಗಳೂರು ತಾಲ್ಲೂಕಿನ ಸಿರಿವಾಸ್ ಗ್ರಾಮದ ಆಸ್ಪತ್ರೆಯ ಕಟ್ಟಡ ಹಾಗೂ ಸಿಬ್ಬಂದಿಯ ನೇಮಕ

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ ಚಿಕ್ಕಮಗಳೂರು ತಾಲ್ಲೂಕಿನ ಸಿರಿವಾಸ್ ಗ್ರಾಮದಲ್ಲಿ ಆರೋಗ್ಯ ಇಲಾಖೆಯಿಂದ 10 ಹಾಸಿಗೆಗಳ ಆಸ್ಪತ್ರೆಯ ಕಟ್ಟಡ ಕಾಮಗಾರಿಕೆ ಮುಕ್ತಾಯಗೊಂಡಿದೆಯೇ ಈ ಕಟ್ಟಡದ ಕಾಮಗಾರಿಕೆಯು ಕರ್ನಾಟಕ ಭೂ ಸೇನಾ ನಿಗಮದವರು ಪೂರ್ಣಗೊಳಿಸಿರುತ್ತಾರೆಯೇ? ಆಗಿದ್ದಲ್ಲಿ ಈ ಆಸ್ಪತ್ರೆಗೆ ಅವಶ್ಯಕವಾಗಿ ಬೇಕಾದ ವೈದ್ಯರು ದಾದಿಯರು ಮುಂತಾದ ಅವಶ್ಯಕ ಸಿಬ್ಬಂದಿಗಳ ನೇಮಕ ಮಾಡಬೇಕಾದುದು ಸರ್ಕಾರದ ಅವಶ್ಯ ಕೆಲಸ ಹಾಗಾಗಿ ಸಿಬ್ಬಂದಿ ನೇಮಕ ಮಾಡಲಾಗಿದೆಯೇ ಮಾಡಿದ್ದಲ್ಲಿ ಯಾವ ಯಾವ ಹುದ್ದೆಗಳಿಗೆ ನೇಮಕ ಮಾಡಲಾಗಿದ ಹುದ್ದೆವಾರು ವಿವರ ನೀಡುವುದು. ನೇಮಕ ಮಾಡಿದ್ದಲ್ಲಿ ಈಗ ಹಾಲಿ ಕಾರ್ಯನಿರ್ವಹಿಸುತ್ತಿದ್ದಾರೆಯೇ. ಈ ಪ್ರದೇಶದ ಜನರಿಗೆ ಇರುವ ಅಥವಾ ಸಿಗುತ್ತಿರುವ ಸೌಲಭ್ಯಗಳೇನು ಇವರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು.?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಸಚಿವರು) : ಸಾನ್ಯ ಅಧ್ಯಕ್ಷರೇ. ಮಾನ್ಯ ಸಗೀರ್ ಅಹಮದ್‌ರವರು ಚಿಕ್ಕಮಗಳೂರು ತಾಲ್ಲೂಕಿನ ಸಿರಿವಾಸ್ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ

ಕೇಂದ್ರಕ್ಕೆ ಬೇಕಾದ ಸೌಲಭ್ಯಗಳ ಬಗ್ಗೆ ನಿಯಮ 334 ರಲ್ಲಿ ಗಮನ ಸೆಳೆದಿದ್ದಾರೆ. ಮಾನ್ಯ ಅಧ್ಯಕ್ಷರೇ ಪ್ರಾಥಮಿಕ ಆರೋಗ್ಯ ಕೇಂದ್ರ 1986ರಲ್ಲಿ ಮಂಜೂರಾಗಿದೆ. ಮತ್ತು ಇದರ ಕಟ್ಟಡಕ್ಕಾಗಿ 8.5 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಕಟ್ಟಡ ಕೂಡ ಕಟ್ಟಿದ್ದೇವೆ. ದಿನಾಂಕ 30-9-91 ರಂದು ಕಟ್ಟಡ ಪೂರ್ಣವಾಗಿದೆ. ಆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಬ್ಬ ವೈದ್ಯರನ್ನು ವರ್ಗ ಮಾಡಿದ್ದವು. ಅವರು ಬೇರೆ ಕಡೆಗೆ ಪಿ.ಜಿ. ಕೋರ್ಸ್ ಮಾಡಲು ಹೋಗಿದ್ದರಿಂದ ಆ ಸ್ಥಾನ ತೆರವಾಯಿತು. ಶೀಘ್ರದಲ್ಲೇ ಆ ಹುದ್ದೆಯನ್ನು ಭರ್ತಿ ಮಾಡಲಾಗುವುದು ಮತ್ತು ಆ ಆರೋಗ್ಯ ಕೇಂದ್ರಕ್ಕೆ ಬೇಕಾದುಂಥ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಮೊನ್ನೆ ತಾನೆ ನಮ್ಮ ಆರ್ಥಿಕ ಇಲಾಖೆಯವರು ಇದ್ದ ನಿರ್ಬಂಧವನ್ನು ತೆಗೆದುಹಾಕಿದ್ದಾರೆ. ಈ ಕೂಡಲೇ ಅಲ್ಲಿಗೆ ಸಾಕಷ್ಟು ಸಿಬ್ಬಂದಿ ಹಾಕತಕ್ಕಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆಂದು ಈ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಜೆ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೇ ಎರಡನೇ ಮಹಾಯುದ್ಧದಲ್ಲಿ ಭಾಗವಹಿಸಿದ್ದ ಸೈನಿಕರಿಗೆ ನಿವೃತ್ತಿ ವೇತನವನ್ನು ಮಂಜೂರು ಮಾಡುವ ಬಗ್ಗೆ ಮನವಿಯನ್ನು ಒಪ್ಪಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ. ಶ್ರೀರಾಂಪುರ ಹೋಬಳಿ ಕುದುರೆ ಕಣಿವೆ, ಸರ್ವೆ ನಂ. 1ರ ಸಾಗುವಳಿ ಜಮೀನಿನಲ್ಲಿ ಅರಣ್ಯ ಇಲಾಖೆಯವರು ಸಸಿ ನೆಡಲು ಗುಂಡು ತೆಗೆಯುತ್ತಿರುವ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ಜೆ.ಎಸ್. ಆಳ್ವಾರ್ : ಮಾನ್ಯ ಅಧ್ಯಕ್ಷರೆ. 1) ಖಂಬದ ಕೋಣೆ ಮಂಡಲ್ ಪಂಚಾಯಿತಿಗೆ ಸೇರಿದ ಕಾಲ್ತೋಡು ಹಳ್ಳಿಗೆ ಪ್ರೌಢ ಶಾಲೆಯ ಮಂಜೂರಾತಿಯ ಬಗ್ಗೆ.

2) ಕಿರಿ ಮಂಜೇಶ್ವರ ಹಳ್ಳಿಯಲ್ಲಿನ ಪ್ರೌಢ ಶಾಲೆ ಮುಂಭಾಗದ ರಸ್ತೆಯನ್ನು ಪೂರ್ಣಗೊಳಿಸುವ ಬಗ್ಗೆ.

3) ಖಂಬದ ಕೋಣೆಗೋಳಿ ಹೊಳೆ ಹಳ್ಳಿಯ ರಸ್ತೆಯನ್ನು ರಿಪೇರಿ ಮಾಡುವ ಬಗ್ಗೆ.

4) ಪಡುವರಿ ಗ್ರಾಮದ ದೊಂಬೆಯಲ್ಲಿ ಗುಂಪುಗಳ ವಿವಾದದಿಂದಾಗಿ ದೇವಸ್ಥಾನವನ್ನು ಮುಚ್ಚಿರುವ ಬಗ್ಗೆ.

5) ಖಂಬದ ಕೋಣೆ ಮಂಡಲ್ ಪಂಚಾಯಿತಿ ವ್ಯಾಪ್ತಿಗೆ ಸೇರಿದ 6 ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಅರ್ಜಿಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ವೈಸ್ ಛೇರ್ಮನ್ : ಅರ್ಜಿಗಳನ್ನು ಒಪ್ಪಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಸಾಮಾನ್ಯ ಚರ್ಚೆ

ವೈಸ್ ಛೇರ್ಮನ್ : 1992-93ನೇ ಸಾಲಿನ ಈ ಕೆಳಕಂಡ ಬೇಡಿಕೆಗಳ ಚರ್ಚೆ ಮತ್ತು ಮತಕ್ಕೆ ಹಾಕುವುದು. ಬೇಡಿಕೆ ಸಂಖ್ಯೆ : 23, 25. 26. ರಾಜ್ಯದ ಅಬಕಾರಿ. ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳು, ಜೈಲು ಇತ್ಯಾದಿ ಬೇಡಿಕೆಗಳನ್ನು ಮಂಡಿಸಬೇಕು.